ಅಲ್ಲದೆ ಒಟ್ಟು 70 ವಸತಿ ಶಾಲೆಗಳಿಗೆ ಕಟ್ಟಡದ ಅವಶ್ಯಕತೆ ಇದೆ. ಆದ್ದರಿಂದ ಇದಕ್ಕೊಂದು ಸೊಸೈಟಿ ಮಾಡಿ ರಿಜಿಸ್ಟರ್ ಮಾಡಲಾಗಿದ್ದು ಮತ್ತು ಹುಟ್ಕೋದಿಂದ ಸಾಲ ತೆಗೆದುಕೊಂಡು ಎಲ್ಲಾ ವಸತಿ ಶಾಲೆಗಳಿಗೆ ಕಟ್ಟಡ ಕಟ್ಟಿಸಿಕೊಡತಕ್ಕಂಥ ಒಂದು ತೀರ್ಮಾನವನ್ನು ಸರ್ಕಾರ ಮಾಡಿದೆ. ನನಗೂ ಸಹ ಇದರ ಬಗ್ಗೆ ತುಂಬಾ ಆಸಕ್ತಿ ಇದೆ. ಏಕೆಂದರೆ ನಾನು ಕೂಡ ಅನೇಕ ಕಡೆ ಇಂಥ ಶಾಲೆಗಳನ್ನು ನೋಡಿದ್ದೇನೆ. ಈ ಶಾಲೆಗಳಿಗೆ ಅನುಕೂಲಕರವಾದಂಥ ಸ್ಥಿತಿಗತಿಗಳು ಇಲ್ಲದೇ ಇರುವುದರಿಂದ ಇವುಗಳನ್ನು ವಸತಿ ಶಾಲೆಗೆಂದು ಯಾರು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ, ಇದಕ್ಕೊಂದು ಕಾಯಕಲ್ಪ ಮಾಡದೇ ಹೋದರೆ ಯಾರಿಗೂ ಸಹ ಗೌರವ ಬರುವುದಿಲ್ಲ. ಆದ್ದರಿಂದ ಆದಷ್ಟು ಬೇಗ ಕಟ್ಟಡ ಕಟ್ಟಿಸಿಕೊಡುವಂಥ ನಿಟ್ಟಿನಲ್ಲಿ ನಾನು ಕೆಲಸ ಮಾಡಿಸುತ್ತೇನೆಂದು ಈ ಸದನಕ್ಕೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ದೊಡ್ಡ ಬಳ್ಳಾಪುರದಲ್ಲಿರುವ ಕೈಗಾರಿಕೆಗಳ ಕುರಿತು.

261 (2482) : **ಶ್ರೀ ಕೃಷ್ಣಪ್ಪ. ಎ. (ದೊಡ್ಡಬಳ್ಳಾಪುರ)** : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ದೊಡ್ಡಬಳ್ಳಾಪುರ ಕೈಗಾರಿಕಾ ವಸಾಹತುವಿನಲ್ಲಿ ಒಟ್ಟು ಎಷ್ಟು ಕೈಗಾರಿಕೆಗಳು ಸ್ಥಾಪಿತಗೊಂಡಿವೆ; (ಪೂರ್ಣ ವಿವರಗಳನ್ನು ನೀಡುವುದು) ಅವುಗಳಲ್ಲಿ ಎಷ್ಟು ಕೈಗಾರಿಕೆಗಳು ಮುಚ್ಚಲ್ಪಟ್ಟಿವೆ; ಕಾರಣಗಳೇನು?

(ಆ) ದೊಡ್ಡಬಳ್ಳಾಪುರದಲ್ಲಿ ನಿರ್ಮಾಣಗೊಂಡಿರುವ ಬೀರ್ಸಾ ಸಿಮೆಂಟ್ ಪ್ಯಾಕಿಂಗ್ ಫ್ಯಾಕ್ಟರಿಗೆ ಸರ್ಕಾರ ಆರ್ಥಿಕ ಸೌಲಭ್ಯ ಒದಗಿಸಿದೆಯೇ? (ತಿಳಿಸುವುದು)

ಶ್ರೀ ಎಸ್. ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

(ಅ) ದೊಡ್ಡಬಳ್ಳಾಪುರ ಕೈಗಾರಿಕಾ ವಸಾಹತುವಿನಲ್ಲಿ ಕೆಎಸ್ಎಸ್ಐಡಿಸಿ ರವರು 104 ಮಳಿಗೆಗಳನ್ನು ನಿರ್ಮಿಸಿದ್ದು, 98 ಮಳಿಗೆಗಳನ್ನು ಹಂಚಿಕೆ ಮಾಡಿರುತ್ತಾರೆ. 6 ಮಳಿಗೆಗಳು ಖಾಲಿ ಇವೆ. ಹಂಚಿಕೆ ಮಾಡಲಾಗಿರುವ 98 ಮಳಿಗೆಗಳಲ್ಲಿ 8 ಮಳಿಗೆಗಳನ್ನು ಕೆಎಸ್ಎಸ್ಐಡಿಸಿ ರವರು ಹಣ ಪಾವತಿಸದಿರುವುದರಿಂದ ಬೀಗ ಮುದ್ರೆ ಹಾಕಿರುತ್ತಾರೆ. 104 ಮಳಿಗೆಗಳಲ್ಲಿ 'ಎ' ಮಾದರಿ 10, 'ಬಿ' ಮಾದರಿ 42, 'ಸಿ' ಮಾದರಿ 36 ಮತ್ತು 'ಡಿ' ಮಾದರಿ 16 ಇರುತ್ತದೆ. ನಡೆಯುತ್ತಿರುವ ಘಟಕಗಳ ಪೈಕಿ 22 ಘಟಕಗಳು ಪಾಲುದಾರಿಕೆ ತೊಂದರೆ, ವಿದ್ಯುತ್ ತೊಂದರೆ ಹಣಕಾಸಿನ ತೊಂದರೆ, ಆರ್ಥಿಕ ಹಿನ್ನೆಡೆ ಹಾಗೂ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಇತರೆ ಹಣಕಾಸಿನ ಮರುಪಾವತಿ ತೊಂದರೆಗಳಿಂದ ರೋಗಗ್ರಸ್ತವಾಗಿರುತ್ತವೆ. ಕೈಗಾರಿಕೆಗಳು ಮುಚ್ಚಲು ಕಾರಣಗಳೆಂದರೆ;

1. ಆರ್ಥಿಕ ಹಿನ್ನೆಡೆ
2. ಸಣ್ಣ ಕೈಗಾರಿಕೆಗಳಿಗೆ ಮಾರುಕಟ್ಟೆ ಕೊರತೆ
3. ಅಗತ್ಯ ದುಡಿಮೆ ಬಂಡವಾಳದ ಕೊರತೆ
4. ವಿದ್ಯುತ್ ತೊಂದರೆ - ಆಗಿಂದಾಗ್ಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

5. ದೊಡ್ಡ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಂದ ಹಣ ಪಾವತಿಯಲ್ಲಿ ವಿಳಂಬ.
6. ಒಂದೇ ಬಗೆಯ ಕೈಗಾರಿಕೆಗಳ ಗುಂಪು
7. ಪಾಲುದಾರರ ವಿವಾದ
8. ಕೈಗಾರಿಕೆಗಳನ್ನು ನಡೆಸುವಲ್ಲಿ ಪ್ರಾವಿಣ್ಯತೆಯ ಕೊರತೆ.

(ಆ) ಸರ್ಕಾರದ ವತಿಯಿಂದ ಯಾವುದೇ ರೀತಿಯ ಆರ್ಥಿಕ ಸೌಲಭ್ಯ ಒದಗಿಸಿರುವುದಿಲ್ಲ.

ಶ್ರೀ ವಿ. ಕೃಷ್ಣಪ್ಪ : ದೊಡ್ಡ ಬಳ್ಳಾಪುರ ಕೈಗಾರಿಕಾ ಕೇಂದ್ರದಲ್ಲಿ ಒಟ್ಟು 104 ಸಣ್ಣ ಕೈಗಾರಿಕೆಗಳಿವೆ. ಇದರಲ್ಲಿ 22 ಕೈಗಾರಿಕೆಗಳು ಈಗಾಗಲೇ ಮುಚ್ಚಲಾಗಿದೆ ಎಂದು ಮಾನ್ಯ ಮಂತ್ರಿಯವರು ಉತ್ತರ ಕೊಟ್ಟಿದ್ದಾರೆ. ಈ 22 ಕೈಗಾರಿಕೆಗಳು ಮುಚ್ಚಿರುವುದಕ್ಕೆ ನಾನಾ ಕಾರಣಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಮುಖ್ಯವಾಗಿ ವಿದ್ಯುಚ್ಛಕ್ತಿ ಅಭಾವದಿಂದ ಮುಚ್ಚಲಾಗಿದೆ ಎಂದು ಹೇಳಲಾಗಿದೆ. ಹಾಲಿ 82 ಕೈಗಾರಿಕೆಗಳು ಮಾತ್ರ ಕಾರ್ಯ ನಿರ್ವಹಿಸುತ್ತಿವೆ. ನನಗೆ ತಿಳಿದ ಮಟ್ಟಿಗೆ ವರ್ಷಕ್ಕೆ ಸುಮಾರು 20 ಕೈಗಾರಿಕೆಗಳು ಮುಚ್ಚುತ್ತಾ ಹೋಗುತ್ತಿವೆ. ಈ ಕೈಗಾರಿಕೆಗಳವರು ಸರ್ಕಾರದಿಂದ ಬರತಕ್ಕಂಥ ಸಬ್ಸಿಡಿ ಹಣವನ್ನು ಮತ್ತು ಬ್ಯಾಂಕಿನಿಂದ ಬರತಕ್ಕಂಥ ಹಣವನ್ನು ಕೈಗಾರಿಕೆಗಳನ್ನು ಮುಚ್ಚಿಕೊಂಡು ಹೋಗುತ್ತಿದ್ದಾರೆ. ಆದ್ದರಿಂದ ಅಲ್ಲಿರತಕ್ಕಂಥ ಕಾರ್ಮಿಕರ ಮುಂದಿನ ಗತಿ ಏನು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇವರ ಬಗ್ಗೆ ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆಯೇ? ಇಲ್ಲಿ ಉಳಿದಿರತಕ್ಕಂಥ 82 ಕಾರ್ಖಾನೆಗಳು ಇನ್ನು ಎರಡು - ಮೂರು ವರ್ಷಗಳಲ್ಲಿ ಮುಚ್ಚಿಕೊಂಡು ಹೋದರೆ ಅಲ್ಲಿರತಕ್ಕಂಥ ಕಾರ್ಮಿಕರು ಬೀದಿಪಾಲಾಗುತ್ತಾರೆ. ಆದ್ದರಿಂದ ಹಾಲಿ ಉಳಿದಿರತಕ್ಕಂಥ ಕೈಗಾರಿಕೆಗಳು ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗುವುದಕ್ಕೆ ಸರ್ಕಾರ ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆಯೇ ಎಂಬುದರ ಬಗ್ಗೆ ಮಾನ್ಯ ಕೈಗಾರಿಕಾ ಸಚಿವರು ಉತ್ತರ ಕೊಡಬೇಕು.

ಶ್ರೀ ಎಸ್. ಆರ್. ಕಾಶಪ್ಪನವರ್ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಒಟ್ಟು ಶೇಕಡ 30 ರಷ್ಟು ಕೈಗಾರಿಕೆಗಳು ರೋಗಗ್ರಸ್ತವಾಗಿವೆ. ಈ ಕಾರ್ಖಾನೆಗಳ ಆರ್ಥಿಕ ಹಿನ್ನೆಡೆಗೆ ಮುಖ್ಯವಾದ ಕಾರಣವೇನೆಂದರೆ, ಬಂಡವಾಳ ಇಲ್ಲದೇ ಇರುವುದು ಮತ್ತು ಅವರಲ್ಲಿ ಕಾರ್ಖಾನೆಯನ್ನು ಉತ್ತಮವಾದಂಥ ರೀತಿಯಲ್ಲಿ ನಡೆಸುವಂಥ ಪ್ರತಿಭೆ ಇಲ್ಲದೇ ಇರುವುದು ಹಾಗೂ ಅನೇಕ ಬೃಹತ್ ಕೈಗಾರಿಕೆಗಳ ಜೊತೆ ಮಾರ್ಕೆಟಿಂಗ್ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲದಿರುವುದು ಇದರ ಜೊತೆಗೆ ಇನ್ನು ಸುಮಾರು 20 ಕಾರಣಗಳಿವೆ. ಕೈಗಾರಿಕಾ ಇಲಾಖೆ ಇವರಿಗೆ ಬೇಕಾಗಿರುವ ಮೂಲಭೂತವಾದ ಸೌಕರ್ಯಗಳನ್ನು ಮಾತ್ರ ಒದಗಿಸುತ್ತದೆ. ಉಳಿದಂಥವುಗಳನ್ನು ಅವರೇ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಇಂಥ ರೋಗಗ್ರಸ್ತ ಕೈಗಾರಿಕೆಗಳ ಪುನಶ್ಚೇತನ ಮಾಡುವುದಕ್ಕೆ ಒಂದು ನೀತಿಯನ್ನು ರೂಪಿಸತಕ್ಕಂಥ ವಿಚಾರವನ್ನು ಇಲಾಖೆ ಹೊಂದಿದೆ ಎನ್ನತಕ್ಕಂಥ ವಿಷಯವನ್ನು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಿ. ಕೃಷ್ಣಪ್ಪ : ಕಾರ್ಮಿಕರು ಎರಡು - ಮೂರು ವರ್ಷಗಳ ಕಾಲ ಕೆಲಸ ಮಾಡಿದ ನಂತರ ಅವರನ್ನು ಮನೆಗೆ ಕಳುಹಿಸಿದರೆ ಅವರ ಗತಿ ಏನು? ಕೈಗಾರಿಕೆಗಳ ಸ್ಥಾಪನೆಗೊಸ್ಕರ ತಮ್ಮಲ್ಲಿರತಕ್ಕಂಥ ಎಲ್ಲಾ ಜಮೀನನ್ನು ಮಾರಾಟ ಮಾಡಿದ್ದು, ಅವರಿಗೆ ಕೆಲಸವು ಇಲ್ಲದೇ ಹೋದರೆ ಅವರೆಲ್ಲರೂ ಬೀದಿಪಾಲಾಗುತ್ತಾರೆ. ಆದ್ದರಿಂದ ಇವರ ಬಗ್ಗೆ ಸರ್ಕಾರ ಏನಾದರೂ ಯೋಚನೆ ಮಾಡಿದೆಯೆ?

ಶ್ರೀ ಎಸ್. ಆರ್. ಕಾಶಪ್ಪನವರ್ : ಕೈಗಾರಿಕಾ ಪುನಶ್ಚೇತನ ನೀತಿಯನ್ನು ರೂಪಿಸತಕ್ಕಂಥ ವಿಚಾರವನ್ನು ನಾವು ಇಟ್ಟುಕೊಂಡಿದ್ದೇವೆ. ಈ ಒಂದು ನೀತಿಯನ್ನು ಸರ್ಕಾರ ಆದಷ್ಟು ಬೇಗ ಪ್ರಕಟಿಸುತ್ತದೆ.

ಹೊಳಲ್ಕೆರೆ ಕ್ಷೇತ್ರದಲ್ಲಿ ಅಂಬೇಡ್ಕರ್ ಭವನ

262 (2472) : ಶ್ರೀ ರಮೇಶ್. ಪಿ. (ಹೊಳಲ್ಕೆರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಹೊಳಲ್ಕೆರೆ ತಾಲ್ಲೂಕಿನಲ್ಲಿ ಕಳೆದ 5 ವರ್ಷಗಳಿಂದ ಅಂಬೇಡ್ಕರ್ ಭವನ ಕಟ್ಟಲು ಪ್ರಾರಂಭಿಸಲಾಗಿದ್ದು, ಅರ್ಧಕ್ಕೆ ನಿಲ್ಲಿಸಲು ಕಾರಣವೇನು?

(ಆ) ಅರ್ಧಕ್ಕೆ ನಿಲ್ಲಿಸಿದ್ದರಿಂದ ದೀನದಲಿತರಿಗೆ ತೊಂದರೆ ಮಾಡಿದಂತೆ ಆಗುತ್ತದೆ; ಯಾವಾಗ ಮುಗಿಸುತ್ತೀರಾ;

(ಇ) ಈ ಭವನದ ಕಟ್ಟಡವನ್ನು ಎಂದು ಪೂರ್ಣಗೊಳಿಸಲಾಗುವುದು;

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಸರ್ಕಾರದ ವತಿಯಿಂದ ಹೊಳಲ್ಕೆರೆ ತಾಲ್ಲೂಕಿನಲ್ಲಿ ಅಂಬೇಡ್ಕರ್ ಭವನವನ್ನು ನಿರ್ಮಾಣ ಮಾಡುವ ಕಾಮಗಾರಿಯನ್ನು ತೆಗೆದುಕೊಂಡಿರುವುದಿಲ್ಲ.

(ಆ) ಉದ್ಭವಿಸುವುದಿಲ್ಲ.

(ಇ) ಉದ್ಭವಿಸುವುದಿಲ್ಲ.

ಶ್ರೀ ಪಿ. ರಮೇಶ್ : ಸನ್ಮಾನ್ಯ ಅಧ್ಯಕ್ಷರೆ, ಹೊಳಲ್ಕೆರೆ ತಾಲ್ಲೂಕಿನಲ್ಲಿ ಸುಮಾರು 5-10 ವರ್ಷಗಳ ಹಿಂದಿನಿಂದ ಯೋಚನೆ ಮಾಡಿ ಅಂಬೇಡ್ಕರ್ ಭವನಗಳ ಕಟ್ಟಡಗಳನ್ನು ಪ್ರಾರಂಭ ಮಾಡಿ, ಪ್ರತಿ ಪಂಚಾಯತಿಯಲ್ಲಿ ಮತ್ತು ದೊಡ್ಡ ದೊಡ್ಡ ಗ್ರಾಮಗಳಲ್ಲಿ ಕಟ್ಟಡಗಳನ್ನು ಪ್ರಾರಂಭ ಮಾಡಿ ಹಾಗೆ ಬಿಟ್ಟಿದ್ದಾರೆ. ಅಲ್ಲಿನ ಯಾವುದೇ ಗ್ರಾಮಗಳಿಗೆ ನಾವು ಹೋದಾಗ ಸಾಮಾನ್ಯವಾಗಿ ಇತ್ತೀಚಿನ ದಿನಗಳಲ್ಲಿ ಅಂಬೇಡ್ಕರ್ ಭವನ ಎಂದ ತಕ್ಷಣ ಇವತ್ತಿನ ಎಲ್ಲಾ ವಾತಾವರಣದಲ್ಲಿ ಸಾರ್ವಜನಿಕರಿಗೆ ಎನ್ನುವ ಅರ್ಥವಿದ್ದರೂ ದೀನದಲಿತರಲ್ಲಿ ಒಂದು ಸಮುದಾಯ ಭವನದ ತರಹ ಇರುತ್ತದೆ. ಸಣ್ಣಪುಟ್ಟ ಮನೆ ಅಥವಾ ಗುಡಿಸಲುಗಳಲ್ಲಿ ವಾಸ ಮಾಡತಕ್ಕಂಥ ಜನಗಳಿಗೆ ಯಾವುದಾದರೂ ಒಂದು ಕಾರ್ಯಕ್ರಮವನ್ನು ಮಾಡುವುದಕ್ಕೆ ಇರುತ್ತದೆ ಎನ್ನತಕ್ಕಂಥ ಆಸೆಯನ್ನು ಜನ ಇಟ್ಟುಕೊಂಡಿರುತ್ತಾರೆ. ಕನಿಷ್ಟ 10-15 ವರ್ಷಗಳಾದರೂ ಆ ಬೆಡ್ ಹಾಕಿದ್ದರೆ ಮೇಲೆ